# ಗೋ ವಿಶ್ವ

Cow Universe

गौ विश्व

ವಿರೋಧಿ ಸಂವತ್ಸರ | ವೈಶಾಖ | ಎಪ್ರಿಲ್-ಮೇ ೨೦೧೦ | ಸಂಪುಟ-೪ | ಸಂಚಿಕೆ-೪


## ಗುರುವಾಣಿ

# ಗೋ ಬಂಧುಗಳಾಗೋಣ ಬನ್ನಿ...



ತಾಯಿಯ ಒಡಲಾಳದಿಂದ ಜನ್ಮತಳೆದ ಅನಂತರದಲ್ಲಿ... ಈ ಜಗದೊಂದಿಗೆ ಬಾಂಧವ್ಯ ಬೆಳೆಯುತ್ತದೆ, ಬಂಧುಗಳ ಪರಿಚಯವಾಗುತ್ತದೆ.

ಆದರೆ, ಅದಕ್ಕೂ ಮುಂಚಿನ ದಿನಗಳಲ್ಲಿ ತಾಯಿ ತನ್ನ ಒಡಲಾಳದ ಮಗುವಿಗೆ ಪ್ರೀತಿಯನ್ನು ಊಡಿಸಲು ಹಸುವನ್ನು ಆಶ್ರಯಿಸುತ್ತಾಳೆ. ಕರುಳ ಕಂದಮ್ಮನ ಉದರ ಭರಣದ ಸಲುವಾಗಿ ಹಾಲಿಗೆ ಮೊರೆ ಹೋಗುತ್ತಾಳೆ.

ಆ ಸಂಗತಿ ಅಮ್ಮ ಹೇಳಿದ ಹೊರತಾಗಿ ಗೊತ್ತಾಗುವುದಿಲ್ಲ. ಆದರೆ, ಹುಟ್ಟಿದ ಮೂರ್ನಾಲ್ಕು ವರ್ಷಗಳಿಂದ ಮಣ್ಣಲ್ಲಿ ಮಣ್ಣಾಗುವ ತನಕ ಹಾಲೆಂಬ ಪ್ರೇಮರಸವನ್ನು ಊಡಿಸುವ ಗೋವಿನ ಪರಿಚಯ ಇಲ್ಲದಿರಲಿಕ್ಕಿಲ್ಲ.

ಅಂತಹುದೊಂದು ಭಾವಜೀವಿಯೊಡನೆ ಏರ್ಪಟ್ಟು, ತಂತಾನೇ ಗಟ್ಟಿಗೊಳ್ಳುತ್ತಿರುವ ಬಂಧುತ್ವದ ಬೆಸುಗೆಗೊಂದು ಗೌರವ ಈ 'ಗೋ ಬಂಧು'ವೆಂಬ ಬಾಂಧವ್ಯದ ಅಂಕುರಾರೋಪಣ.

ಇರುವ ಸಂಬಂಧಕ್ಕೇ ತಿಲಕವಿಟ್ಟು ಗೌರವಿಸಲು, ಕರುಳ ಬಳ್ಳಿಯ ಸ್ರೋತಕ್ಕೊಂದು ನಮನ ಸಲ್ಲಿಸಲು, ಕಾಳಜಿಯ ಘನತೆಯನ್ನು ಮೆರೆಯಲು ಈ ಯೋಜನೆ ಅರಳುತ್ತಿದೆ.

ಗೋ ಬಂಧುಗಳಾಗಿ ಗೋವಿನ ಉದರ, ಭರಣ, ಪೋಷಣದ ಬಗೆಗೂ ಗಮನಹರಿಸೋಣ ಬನ್ನಿ.

ಗೋವಿನ ಉಳಿವು ನಮ್ಮ ಉಳಿವು

ಗೋವಿನ ನಾಶ ಸರ್ವ ನಾಶ

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ



### ಹೂರಣ


**ಗುರುವಾಣಿ**
**ಪ್ರಶ್ನೋತ್ತರ**
**ಮಾಸದ ಗೋವು: ಜವಾರಿ**
**ಯಾತ್ರೆಯ 'ಲೈವ್' ಕಹಾನಿ**
**ವಿಧೇಯಕಕ್ಕೆ ಸ್ವಾಗತ**



ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org, gougram.org
ಸಂಪರ್ಕ: govishva@gmail.com






## ಪ್ರಶ್ನೋತ್ತರ

ಪ್ರಶ್ನೆ: ಆಡು, ಕುರಿ, ಎಮ್ಮೆ ಇತ್ಯಾದಿಗಳು ಸಾಕು ಪ್ರಾಣಿಗಳಲ್ಲವೇ? ಹೀಗಿದ್ದೂ ಅವುಗಳಿಗೆ ಇಲ್ಲದ ವಿಶೇಷತೆ ಗೋವಿಗೆ ಯಾಕೆ?

ಉ: ಗೋವು ಮಾನವನ ಜೀವನದಲ್ಲಿ ಹಾಸು ಹೊಕ್ಕಾಗಿದೆ. ಮನುಷ್ಯನ ಜೀವನದ ಪ್ರತಿಯೊಂದು ರಂಗದಲ್ಲಿ ಕೂಡ ಗೋವು ಎಲ್ಲ ದೃಷ್ಟಿಯಲ್ಲಿ ಉಪಯೋಗಿ. ಗೋವಿನಿಂದ ದೊರಕುವ ಉಪ ಉತ್ಪನ್ನಗಳು ಮಾನವ ಜೀವನಕ್ಕೆ ಅತ್ಯಂತ ಉಪಯೋಗಿ.

ಪ್ರ: ಗೋವು ಕೂಡ ಉಳಿದ ಪ್ರಾಣಿಗಳಂತೆಯೇ ಜೀವನ ವಿಧಾನ, ಆಹಾರ ಸೇವನೆ ನಡೆಸುತ್ತಿರುವಾಗ ಅದನ್ನು ಪ್ರತ್ಯೇಕವಾಗಿ ಯಾಕೆ ಗಮನಿಸಬೇಕು ?

ಉ: ಗೋವಿಗೆ ಇರುವ ಸಾಮರ್ಥ್ಯ: ತನಗೆ ಬೇಕಾದ ಆಹಾರವನ್ನು ತನಗೆ ಬೇಕಾದ ಹೊತ್ತಿನಲ್ಲಿ ಪಡಕೊಳ್ಳುವ ಸಾಮರ್ಥ್ಯ, ಮಾತ್ರವಲ್ಲ ಸೋಮಾರಿತನವನ್ನು ಬಿಟ್ಟು ಚುರುಕುತನವನ್ನು ಮೈಗೂಡಿಸಿಕೊಂಡಿದೆ.

ಪ್ರ: ಒಂದು ಕುಟುಂಬದಲ್ಲಿ ಒಂದು ಆಕಳು ಇದ್ದರೆ ಗೋರಕ್ಷಣೆ ಸಾದ್ಯವಾಗಬಹುದೇ?

ಉ: ಖಂಡಿತ ಸಾದ್ಯವಾಗುತ್ತದೆ. ಇಡೀ ಸಮಾಜದ ಬೆಂಬಲ ಇದ್ದಾಗ ಒಂದು ಮನೆಯಲ್ಲಿ ಒಂದು ಆಕಳು ಅಸಾಧ್ಯವೇನಲ್ಲ.

**– ಸಂಗ್ರಹ: ಸದಾಶಿವ ಮೋಂತಿಮಾರ್ ಮತ್ತು ಉಲ್ಲಾಸ್** ಸಿ. ಕೆ.

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 31ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com

ಮಾಸದ ಗೋವು

# ಕಂಧಾರಿ

**ಉತ್ತರ ಕರ್ನಾಟಕದ ಸಾವಿರದ ಆರುನೂರು ವರ್ಷಗಳಷ್ಟು ಹಳೆಯದಾದ ಈ ತಳಿ ಇಂದಿಗೂ ಉಳಿದದ್ದೇ ಒಂದು ಕತೆ. ಲಾತೂರಿನ ಜಾನುವಾರು ಸಂತೆಗಳಲ್ಲಿ ಕಂಧಾರಿ ತಳಿಯ ಹೋರಿಯೊಂದರ ಬೆಲೆ ಬರೊಬ್ಬರಿ ಒಂದೂ ವರೆ ಲಕ್ಷ!**

ಭಾರತೀಯ ಗೋ ತಳಿಗಳಲ್ಲಿ ಶೇಕಡ ತೊಂಬತ್ತು ಭಾಗದ ತಳಿಗಳ ಹೆಸರು ಬಂದಿದ್ದು ತಳಿಗಳು ಅಭಿವೃದ್ಧಿಗೊಂಡ ಪ್ರದೇಶದ ಹೆಸರಿನಿಂದಲೇ. ಒಂದೇ ಪ್ರದೇಶದಲ್ಲಿ ಹೆಚ್ಚು ತಳಿಗಳು ಅಭಿವೃದ್ಧಿಗೊಂಡಿರುವ ಸಂದರ್ಭದಲ್ಲಿ ಅವುಗಳಿಗೆ ವಿಶೇಷಣವೊಂದು ಒದಗಿ ಬರುವುದೂ ಇದೆ. ಉದಾ. ಮಲೆನಾಡು ಗಿಡ್ಡ. ಅದಿಲ್ಲವಾದರೆ ಅಮೃತಮಹಲ್‌ನಂತೆ ತಳಿಯ ಹಿರಿಮೆಯನ್ನು ಕಂಡು ಅದನ್ನು ಪೋಷಿಸಿದ, ಅಭಿವೃದ್ಧಿ ಪಡಿಸಿದವರು ವಿಶೇಷ ನಾಮಕರಣ ಮಾಡಿದ ಉದಾಹರಣೆಗಳು ಕೆಲವಿವೆ. ಆದರೆ ವ್ಯಕ್ತಿಯೊಬ್ಬನ ಹೆಸರೇ ತಳಿಯ ಹೆಸರು ಅಂತ ಆಗಿರುವುದು ಕಂಧಾರಿಯ ವಿಷಯದಲ್ಲಿ ಮಾತ್ರ. ಅದು ರಾಜಾ ಕನ್ವಾರ್ ನ ಹೆಸರು. ಜನರ ನಾಲಿಗೆಯ ದುರ್ದಾಳಿಗೆ ಸಿಲುಕಿ ಉಳಿದಿರುವುದು ಕಂಧಾರಿ ಎಂಬ ರೂಪದಲ್ಲಿ!

ಮರಾಠಾವಾಡೆಯ ಉಳುಮೆಯ ಮೂಲಬಲ ಕಂಧಾರಿ ತನ್ನ ವಿಶಿಷ್ಟ ಕೆಂಬಣ್ಣದಿಂದ ಲಾಲ್ (ಕೆಂಪು) ಕಂಧಾರಿ ಎಂದೇ ಜನಜನಿತ. ಈ ತಳಿಯ ಉಗಮವಾಗಿದ್ದು (ಅಥವಾ ಹೆಚ್ಚಿನ ಪ್ರಚಾರ ದೊರೆಕಿದ್ದು) ಬರೊಬ್ಬರಿ ಸಾವಿರದ ಆರುನೂರು ವರ್ಷಗಳ ಹಿಂದಿದ್ದ ನಾಂದೇಡ್ ಪ್ರಾಂತ್ಯದ ಪ್ರಸಿದ್ಧ ದೊರೆ ರಾಜ ಸೋಮದೇವರಾಯನ ಆಸ್ಥೆ ಅಕ್ಕರೆಗಳಿಂದ. ಬರಪ್ರದೇಶದ ರೈತನ ಬೆನ್ನುಲುಬಿನ ಬಾಗುವಿಕೆಯನ್ನು ಸಂತೃಪ್ತಿಯ ಮುಗುಳ್ನಗೆಯಾಗಿ ಪರಿವರ್ತಿಸಿದ ಈ ತಳಿಯ ಕೆಲಸಗಾರಿಕೆಯ



**ಮೂಲ : ಹೈದರಾಬಾದ್ ಕರ್ನಾಟಕದ ತಳಿ**
**ವಿಭಾಗ : ಉಭಯೋಪಯೋಗಿ ತಳಿ.**
**ಮಧ್ಯಮ ಗಾತ್ರದವುಗಳು. ದೊಡ್ಡ ಡುಬ್ಬ.**
**ಬಣ್ಣ : ಸಾಮಾನ್ಯವಾಗಿ ಕೆಂಪು. ಸ್ವಲ್ಪ ಭಾಗ ಕಪ್ಪು ಇರುವುದೂ ಇದೆ.**
**ಮುಖ : ಉಬ್ಬಿದ, ಅಗಲ ಹಣೆ.**
**ಕೊಂಬು : ಅಷ್ಟೇನೂ ಉದ್ದವಾಗಿಲ್ಲ ಆದರೆ ದಪ್ಪ**
**ಕಾಲುಗಳು : ಶಕ್ತಿಯುತವಾಗಿರುತ್ತವೆ.**
**ಕಿವಿ: ಕೆಳಬಾಗಿದ ಕಿವಿ**

ಮಜಕೂರನ್ನು ಕಂಡ ರಾಜ ಸೋಮದೇವರಾಯ, ತನ್ನ ತಂದೆ ರಾಜ ಕನ್ಹಾರ್ ನ ಹೆಸರಲ್ಲಿ ಈ ತಳಿಯನ್ನು ಪ್ರಚುರಗೊಳಿಸಿದ. ನಂತರ ಇದು ಲಾತೂರು, ಪೋರ್ಬನಿ, ಲೋಹಾ ಪ್ರದೇಶಗಳಲ್ಲಿ ವಿಸ್ತೃತವಾಗಿ ಹರಡಿತು.



ಉಭಯೋಪಯೋಗಿ ಕಂಧಾರಿ ಮಧ್ಯಮ ಗಾತ್ರದ ಅತ್ಯಂತ ಚುರುಕಿನ ಸದೃಢ ತಳಿ. ಸಾಮಾನ್ಯವಾಗಿ ತಳಿಯ ಬಣ್ಣ ಕೆಂಪಾದರೂ, ಹೋರಿಗಳದ್ದು ಹೆಚ್ಚು ಗಾಢವಾದ ಕೆಂಪು. ಉದ್ದ ಕೆಳಬಗ್ಗಿದ ಕಿವಿಗಳು, ಉಬ್ಬಿದ, ಅಗಲ ಹಣೆ, ಕಪ್ಪು ವೃತ್ತದ ಮಧ್ಯದ ಹೊಳೆಯುವ ಕಡುಗಪ್ಪಿನ ಕಣ್ಣುಗಳು, ಅಷ್ಟೇನೂ ಉದ್ದವಾಗಿಲ್ಲದ ಆದರೆ ದಪ್ಪನೆಯ ಕೊಂಬುಗಳು, ದೊಡ್ಡ ಡುಬ್ಬ (ಹೋರಿಗಳಲ್ಲಿ ಗಣನೀಯವಾಗಿ ಎತ್ತರವಾಗಿರುತ್ತದೆ) ಇವು ಕಂಧಾರಿಯ ದೈಹಿಕ ಲಕ್ಷಣಗಳು.

ಸಾವಿರದ ಆರುನೂರು ವರ್ಷಗಳಷ್ಟು ಹಳೆಯದಾದ ಈ ತಳಿ ಇಂದಿಗೂ ಉಳಿದದ್ದೇ ಒಂದು ಕತೆ.

ಬ್ರಿಟೀಷರು ಹೋದ ನಂತರ ಅಧಿಕಾರದಲ್ಲಿದ್ದ ಅವರ ಭಕ್ತರು, ಭಾರತೀಯವಾದದ್ದೆಲ್ಲವೂ ಹೀನವೆಂಬ ಘಟ್ಟಿ ತಿರ್ಮಾನಿಗೆ ಬಂದು ಅವುಗಳೆಲ್ಲವನ್ನು ಸಂರಕ್ಷಿಸುವಲ್ಲಿ, ಸಂಪಾದಿಸುವಲ್ಲಿ ದಿವ್ಯ ನಿರ್ಲಕ್ಷ್ಯ ತೋರಲು ಪ್ರಾರಂಭಿಸಿದರಷ್ಟೆ. ಆ ಕಾಲಘಟ್ಟದವರೆಗೂ ಅಂತ ವೈಪರಿತ್ಯಗಳೇನೂ ಜರುಗಿರಲಿಲ್ಲ. ಆದರೆ ನಂತರ ಮೆಕಾಲೆಯ ಶಿಕ್ಷಣದಿಂದ ಭಾರತೀಯತೆಯ ಉಪೇಕ್ಷೆ ಜನರ ರಕ್ತಗತವಾಗುತ್ತಾ ಹೋದಂತೆ, ಅದರಿಂದ ಭಾರತೀಯ ಪರಂಪರೆಯಲ್ಲಿದ್ದುದೆಲ್ಲವೂ ನಿಷ್ಪ್ರಯೋಜಕವೆಂಬ 'ಸತ್ಯದರ್ಶನ' ಆಳುವ, ಆಳಿಸಿಕೊಳ್ಳುವವರಿಗೆ ಪೂರ್ಣವಾಗಿ ಗೋಚರಿತವಾದ ಮೇಲೆ, ಕೇವಲ ಕಂಧಾರಿಗೇಕೆ ಅವರು ವಿನಾಯಿತಿಯನ್ನು ತೋರಬೇಕು? ಅದನ್ನೂ ಹಾಳುಗೆಡಹುವಲ್ಲಿ ಜನ ಮರೆಯಲಿಲ್ಲ.ಒಂದೇ 'ಸೆಮೆನ್' ಎಲ್ಲ ತಳಿಗೂ ಹೊಂದಿಕೆ ಆಗುತ್ತದೋ ಇಲ್ಲವೊ, ಈ ಅವೈಜ್ಞಾನಿಕ ಪರಿಕ್ರಮದಿಂದ ತಳಿಯ ವಿಶೇಷತೆ ಉಳಿಯುತ್ತದೆಯೊ ಇಲ್ಲವೋ, ಕಿಂಚಿತ್ತೂ ಯೋಚಿಸುವ ಗೋಜಿಗೇ ಹೋಗದೆ, ಕೃತಕ ಗರ್ಭಧಾರಣೆಯ ಮಹಾಸಂಕರದ ವಿಷಬೀಜವನ್ನು ಎಲ್ಲೆಲ್ಲಿಯೂ ಬಿತ್ತತೊಡಗಿದರು. ಮರಾಠವಾಡೆಯ ಉಸಿರಾಗಿದ್ದ ಕಂಧಾರಿಯು ಉಸಿರಡಗತೊಡಗಿತು. ರೈತರಿಗೆ ಕೃತಕ ಗರ್ಭಧಾರಣೆಯಿಂದ ತಳಿಯ ದಾರ್ಢ್ಯತೆ ಕುಸಿಯುತ್ತಿದೆಯೆಂಬ ಅರಿವಿಗೆ ಬರುವಷ್ಟರಲ್ಲಿ ಶುದ್ಧ ತಳಿ ಎಲ್ಲಿದೆ ಎಂಬ ಹುಡುಕುವಷ್ಟರ ಮಟ್ಟಿನ ಅನಾಹುತ ಜರುಗಿಬಿಟ್ಟಿತ್ತು.

1967ರಲ್ಲಿ ಎಚ್ಚರಗೊಂಡ ಸರ್ಕಾರದ ಹೈನುಗಾರಿಕಾ ಮಂತ್ರಾಲಯ, 8 ಆಯ್ದ ಕಂಧಾರಿ ಹೋರಿಗಳನ್ನು ಹಿಂಗೋಲಿಯ ಸಾಕಣಿಕಾ ಕೇಂದ್ರದಲ್ಲಿ ಸಂರಕ್ಷಿಸಿತು. ಸುದೈವವಶಾತ್ ಆ ಪ್ರಯತ್ನವನ್ನು ಅಲ್ಲಿಯೆ ನಿಲ್ಲಿಸದೆ, ಪರ್ಭಾನಿ ಜಿಲ್ಲೆಯ 6 ಹಳ್ಳಿಗಳಲ್ಲಿ ಕೇಂದ್ರಗಳನ್ನು ತೆರೆದು ತಳಿಯ ಸಂರಕ್ಷಣೆಯ ಕುರಿತಾಗಿ ಕೂಡ ಪ್ರಯತ್ನ ನಡೆಯಿತು. ಈ ಪ್ರಯತ್ನಗಳು ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ರೈತರಲ್ಲಿ ಜಾಗ್ರತಿಯೊಂದನ್ನು ಮೂಡಿಸಿ ರೈತರೇ ಆಸ್ಥೆಯಿಂದ ಅದನ್ನು ರಕ್ಷಿಸುವಲ್ಲಿ ಬೇಕಾದ ಮನೋಭೂಮಿಕೆಯನ್ನು ರೂಪಿಸಿತು. ಸಂಪೂರ್ಣ ವಿನಾಶದ ಅಪಾಯ ತಪ್ಪಿತು.

ಹಾಗೆ ಉಳಿದ ಶುದ್ಧ ತಳಿಗೆ ಈಗ ಬಾರೀ ಬೇಡಿಕೆ. ಹಾಗೆ ತಳಿಯ ಬೆಲೆಯನ್ನು ಅರ್ಥಮಾಡಿಕೊಂಡವರಲ್ಲಿ ಒಬ್ಬರಾದ ಲಾತೂರಿನ ಎಸ್.ಬಿ. ಪಾಟೀಲ್ ಈ ತಳಿಯ ಸಂರಕ್ಷಕರೆಂದೆ ಜನಜನಿತರು.

ಈಗ ಲಾತೂರಿನ ಜಾನುವಾರು ಸಂತೆಗಳಲ್ಲಿ ಕಂಧಾರಿ ತಳಿಯ ಹೋರಿಯೊಂದರ ಬೆಲೆ, ನಂಬಿ, ಬರೊಬ್ಬರಿ ಒಂದೂ ವರೆ ಲಕ್ಷ!

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಇವುಗಳ ಸಂಖ್ಯೆ ಒಂದೂವರೆಯಿಂದ ಎರಡು ಲಕ್ಷದಷ್ಟಿದೆ ಎನ್ನುವುದು ಸ್ವಲ್ಪ ಸಮಾಧಾನದ ಸಂಗತಿ. ರೈತನಿಗೆ ತಳಿಯ ಮಹತ್ವ ಅರ್ಥವಾದರೆ, ಅದರ ಕುರಿತಾದ ಜಾಗ್ರತಿಯೊಂದು ಉಂಟಾದರೆ ಪ್ರಭುತ್ವದ ನಿರ್ಲಕ್ಷದ ಹೊರತಾಗಿಯೂ ತಳಿ ಉಳಿದುಕೊಳ್ಳಬಹುದೆಂಬುದಕ್ಕೆ ಇದುವೆ ಸಾಕ್ಷಿ.

**– ಮಧುಕೇಶ ದೊಡ್ಡೇರಿ**



# ಗೋ ಸಂರಕ್ಷಣೆಯಲ್ಲಿ ಕ್ರಮಿಸಿದ ಹಾದಿ

ನಮ್ಮ ಪುರಾಣ–ಇತಿಹಾಸಗಳ ಕಾಲದಲ್ಲಿ ಗೋವಿನ ಲಾಲನೆ–ಪಾಲನೆ ನಮ್ಮ ಮಕ್ಕಳದ್ದಿರುವಂತೆಯೇ ಪ್ರೇಮಪೂರಿತವಾಗಿತ್ತು. ಯಜ್ಞಯಾಗಾದಿಗಳ ದಕ್ಷಿಣೆ, ದಾನ, ವಸ್ತು ವಿನಿಮಯ ಇಲ್ಲೆಲ್ಲ ಗೋವಿನದ್ದೇ ಪ್ರಮುಖ ಪಾತ್ರ. ಶ್ರೀಮಂತಿಕೆಯನ್ನು ಗೋ ಸಂಕುಲದ ಆಧಾರದ ಮೇಲೆ ಅಳೆಯುವ ಕ್ರಮವಿತ್ತು. ರಾಜ–ಮಹಾರಾಜರ ಕಪ್ಪ–ಕಾಣಿಕೆಗಳಲ್ಲಿ ಧನ, ಕನಕ, ಗಜ, ತುರಗಗಳಿಗೆ ಮುಕುಟದ ಸ್ಥಾನದಲ್ಲಿ ಗೋವಿರುತ್ತಿತ್ತು.

**ಸ್ಥಾನ–ಮಾನಗಳನ್ನು ಅಲಂಕರಿಸಲು ಮಾನದಂಡ :**

- ನಂದರಾಜನಾಗಲು ಒಂದು ಕೋಟಿ ಗೋವುಗಳ ಪಾಲಕನಾಗಿರಬೇಕು.
- ವೃಷಭಾನುಜನಾಗಲು ಐವತ್ತು ಲಕ್ಷ ಗೋವುಗಳ ಪಾಲಕನಾಗಿರಬೇಕು.
- ವೃಷಭಾನುವಾಗಲು ಹತ್ತು ಲಕ್ಷ
- ನಂದನಾಗಲು ಒಂಭತ್ತು ಲಕ್ಷ
- ಉಪನಂದನಾಗಲು ಐದು ಲಕ್ಷ
- ವ್ರಜನಾಗಲು ಹತ್ತು ಸಾವಿರ

**ಗೋ ಸಂರಕ್ಷಣೆ, ಸಂವರ್ಧನೆಯ ಹಾದಿ :**

□ ರಾಮಾಯಣದ ರಘುವಂಶದ ಪ್ರಾರಂಭ ಸುರಧೇನುವಿನಿಂದ

□ ಮಹಾಭಾರತ ಕಾಲದ ಶ್ರೀಕೃಷ್ಣನ ಹಾಗೂ ನಂದಗೋಪರ ಗೋಸೇವೆ ವಿಶ್ವಕ್ಕೇ ಒಂದು ಆದರ್ಶ

□ ಆದ್ಯ ಶಂಕರಾಚಾರ್ಯರ ಅದ್ವೈತ ಮತ ಪುನಃ ಪ್ರತಿಷ್ಠಾಪನೆಯಲ್ಲಿ ಗೋವಿಗೆ ಉನ್ನತ ಸ್ಥಾನವಿತ್ತು.

**ಕೌಟಿಲ್ಯನ ಅರ್ಥಶಾಸ್ತ್ರ :** ಮೌರ್ಯರ ಕಾಲದ ಸಂವಿಧಾನ. ಚಾಣಕ್ಯ ನೀತಿ ಎಂದೂ ಪ್ರಸಿದ್ಧ. ಅದರಂತೆ ಆಡಳಿತ ಯಂತ್ರದಲ್ಲಿ ಗೋವು–ಹುಲ್ಲುಗಾವಲು–ಪಶು ಆಹಾರದ ನಿರ್ವಹಣೆಗೆ 'ಗೋಧ್ಯಕ್ಷ' ಎಂಬ ಪ್ರತ್ಯೇಕ ಅಧಿಕಾರಿಯನ್ನು ನೇಮಿಸಬೇಕಿತ್ತು. (ಕೌಟಿಲೀಯ ಅರ್ಥಶಾಸ್ತ್ರದ 3ನೇ ಅಧಿಕರಣದ 'ಗೋಧ್ಯಕ್ಷ' ಅಧ್ಯಾಯ)

**ಸಾಮ್ರಾಟ್ ಅಶೋಕ :** ಭಾರತ ವೈಭವಶೀಲವಾಗಬೇಕಾದರೆ ಗೋವುಗಳ ಉನ್ನತಿ ಆಗಲೇಬೇಕು ಎಂಬ ಅಭಿಪ್ರಾಯ ಹೊಂದಿದ್ದ.

□ ಶಾತವಾಹನರ ಕಾಲದಲ್ಲಿ ಗೋದಾನ, ಗೋರಕ್ಷೆ ಅತ್ಯಂತ ಶ್ರೇಷ್ಠ ಕಾರ್ಯವಾಗಿತ್ತು.

□ ರಜಪೂತರು ಗೋ ಸಂರಕ್ಷಣೆಗಾಗಿ ಮಡಿಯಲೂ ಹಿಂಜರಿಯುತ್ತಿರಲಿಲ್ಲ. ಪೃಥ್ವೀರಾಜನ ಸನ್ನಿವೇಶವನ್ನೇ ನೋಡಬಹುದು. ಮಹಮ್ಮದ್ ಘೋರಿ ಬೇಕೆಂದೇ ಹಸುವಿನ ಮಂದೆಗಳನ್ನು ಮುಂದಿಟ್ಟುಕೊಂಡು ಪೃಥ್ವೀರಾಜನ ಮೇಲೆರಗಿದ. ಗೋವಧೆ ಮಾಡುವ ಹೃದಯ ಪೃಥ್ವೀರಾಜನಿಗೆ ಇಲ್ಲದ್ದರಿಂದ ಶಸ್ತ್ರ ತ್ಯಾಗ ಮಾಡಿ, ಘೋರಿಗೆ ಶರಣಾದ.

□ ಶಿವಾಜಿ, ಹಿಂದೂ ರಾಜರ ರಾಜ ಎಂದೇ ಪ್ರಸಿದ್ಧ. ಗೋವುಗಳ ಬಗೆಗೆ ಅವನಿಗಿದ್ದ ಕಾಳಜಿಯನ್ನು ಎತ್ತಿತೋರಿಸುವ ಸನ್ನಿವೇಶ ಸುಪ್ರಸಿದ್ಧ. ಶಿವಾಜಿ ೧೭ ವರ್ಷದವನಿದ್ದಾಗ ರಸ್ತೆಯೊಂದರಲ್ಲಿ ಕಟುಕನೊಬ್ಬ ಹಸುವೊಂದನ್ನು ದರದರ ಎಳೆದುಕೊಂಡು ಹೋಗುತ್ತಿದ್ದುದನ್ನು ನೋಡಿ, ಸಹಿಸಲು ಸಾಧ್ಯವಾಗದೇ ಅಲ್ಲೇ ಅವನ ಶಿರವನ್ನು ತುಂಡರಿಸಿದ.

□ ಮೊಘಲ್ ಸಾಮ್ರಾಜ್ಯದ ಸಂಸ್ಥಾಪಕ ಬಾಬರ್ ತನ್ನ ಮಗ ಹುಮಾಯೂನನಿಗೆ ಬರೆದ ಪತ್ರದಲ್ಲಿ 'ಗೋವಧೆ ಎಂದಿಗೂ ಮಾಡಬಾರದು' ಎಂಬ ಅಂಶವನ್ನು ಉಲ್ಲೇಖಿಸುತ್ತಾನೆ.

**ಅಬ್ದುಲ್ ಫಜಲನ ಐನ್–ಎ–ಅಕ್ಬರಿಯ ಉಲ್ಲೇಖದಂತೆ :** ಗೋವಿನ ಬಗೆಗೆ ಹಿಂದೂಗಳಿಗೆ ಪೂಜ್ಯ ಭಾವನೆಯಿದ್ದುದನ್ನು ಗ್ರಹಿಸಿದ ಅಕ್ಬರ್ ತನ್ನ ರಾಜ್ಯದಲ್ಲಿ ಗೋಮಾಂಸ ಬಳಕೆಗೆ ನಿಷೇಧ ಹೇರಿದ್ದನು.

□ ಮೊಘಲ್ ದೊರೆ ಜಹಾಂಗೀರನ ಕಾಲದಲ್ಲಿ ಗೋವಧೆಯನ್ನು ನಿಷೇಧಿಸಲಾಗಿತ್ತು ಹಾಗೂ ಗೋಹತ್ಯೆ ಮಾಡಿದವರಿಗೆ ಅತ್ಯಂತ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು ಎಂದು ಯಾತ್ರಿಕ ಬರ್ನಿಯರ್ ತನ್ನ ಪುಸ್ತಕದಲ್ಲಿ ಉಲ್ಲೇಖಿಸುತ್ತಾನೆ.

□ ವಿಜಯನಗರದ ಅರಸರ ಕಾಲದಲ್ಲಿ ಬಹುಜನರು ಮಾಂಸಾಹಾರಿಗಳಾಗಿದ್ದರೂ ಗೋಮಾಂಸವನ್ನು ಮಾತ್ರ ಸೇವಿಸುತ್ತಿರಲಿಲ್ಲ.

**ಮೈಸೂರು ಸಂಸ್ಥಾನದ ಕಮಿಷನರ್ ಮಾರ್ಕ್ ಕಬ್ಬನ್ (1834–1861) :** ರಾಜ್ಯದ ಆಡಳಿತವನ್ನು ಒಂಭತ್ತು ವಿಭಾಗಗಳಾಗಿ ವಿಂಗಡಿಸಿ, ಅದರಲ್ಲಿ ಪಶುಸಂಗೋಪನೆಯ ಸಲುವಾಗಿ 'ಅಮೃತಮಹಲ್' (ಕರ್ನಾಟಕದ ಹೆಮ್ಮೆಯ ಗೋ ತಳಿ) ಎಂಬ ವಿಭಾಗವನ್ನು ರೂಪಿಸಿದ್ದನು.

**ಸುಪ್ರೀಂಕೋರ್ಟಿನ 1958ರ ತೀರ್ಪೊಂದರಲ್ಲಿ :** 18ನೇ ಶತಮಾನದ ಹೈದರಾಲಿಯು 'ಗೋಹತ್ಯೆ ಮಾಡುವುದು ಎಲ್ಲಿಯಾದರೂ ಕಂಡುಬಂದಲ್ಲಿ, ಕಟುಕರ ಕೈಗಳನ್ನು ಕತ್ತರಿಸಬೇಕು' ಎಂಬ ಫರ್ಮಾನು ಹೊರಡಿಸಿದ್ದರ ಉಲ್ಲೇಖ ಇದೆ.

**ಅಮೃತ ಮಹಲ್ ಕಾವಲುಭೂಮಿ :** ಅಮೃತ ಮಹಲ್ ಗೋತಳಿ ಸಂವರ್ಧನೆಗಾಗಿ ಮೈಸೂರು ಸಂಸ್ಥಾನದ ಆದ್ಯಂತ 4,13,539 ಎಕರೆ ವಿಸ್ತಾರದ 240 ಹುಲ್ಲುಗಾವಲುಗಳನ್ನು ಮೀಸಲಾಗಿರಿಸಲಾಗಿತ್ತು. 1617ರ ಸುಮಾರಿನಲ್ಲಿ ಮೈಸೂರು ಸಂಸ್ಥಾನದ ಆಶ್ರಯದಲ್ಲಿ ಯೋಜನೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಬೆಣ್ಣೆಚಾವಡಿ ಹಸುಗಳಿಗಾಗಿ ಯೋಜನೆ ಪ್ರಾರಂಭವಾಯಿತು. ನಂತರ, ಟಿಪ್ಪು ಸುಲ್ತಾನನ ಕಾಲದಲ್ಲಿ ಬೆಣ್ಣೆಚಾವಡಿ ಹಸುಗಳಿಗೆ 'ಅಮೃತ ಮಹಲ್' ಎಂದು ಮರು ನಾಮಕರಣ ಮಾಡಿ, ಯೋಜನೆಗೆ ಮೀಸಲಾದ ಹುಲ್ಲುಗಾವಲುಗಳನ್ನು 'ಅಮೃತ ಮಹಲ್ ಕಾವಲುಭೂಮಿ' ಎಂದು ಹೆಸರಿಸಿದ.

**1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮ :** ಗೋವಿನ ಕಾರಣದಿಂದಲೇ ಪ್ರಾರಂಭಗೊಂಡದ್ದು. ಕಾಡತೂಸುಗಳಲ್ಲಿ ಗೋವಿನ ಮತ್ತು ಹಂದಿಯ ಕೊಬ್ಬನ್ನು ಬಳಸಿದ್ದಾರೆಂಬ ಸಂಗತಿ ಸಂಗ್ರಾಮಕ್ಕೆ ಕಿಚ್ಚನ್ನು ಹಚ್ಚಿತು.

**ಮಾಧವರಾವ್ ಪೇಶ್ವೆ :** ಪೇಶ್ವೆ ರಾಜರುಗಳಲ್ಲಿ ಅತ್ಯಂತ ಪ್ರಬಲ. ತನ್ನ ರಾಜ್ಯದಲ್ಲಿ ಗೋವಧೆಯನ್ನು ನಿಷೇಧಿಸಿದ್ದ. 'ಗೋಭಕ್ಷಕರನ್ನು

ಭಾರತದಿಂದಲೇ ಹೊಡೆದೋಡಿಸಬೇಕು' ಎಂದು ಅಭಿಪ್ರಾಯಪಟ್ಟಿದ್ದ.

**1872ರ ಕುಕಾ ಆಂದೋಲನ :** ಗೋವಧೆಯ ತಡೆಗಾಗಿ ನಡೆದ ಬಹುದೊಡ್ಡ ಆಂದೋಲನ. ನಾಮಧಾರಿ ಸಿಖ್ಖರ ನೇತೃತ್ವದಲ್ಲಿ ನಡೆಯಿತು. ಪಂಜಾಬಿನಲ್ಲಿ ಕಸಾಯಿಖಾನೆಗಳ ಸ್ಥಾಪನೆಯನ್ನು ವಿರೋಧಿಸಿ ನಡೆಸಲಾಯಿತು.

- ವೀರ ಸಾವರ್ಕರ್, ಚಂದ್ರಶೇಖರ ಆಜಾದ್, ಬಾಲಗಂಗಾಧರ ತಿಲಕ್, ಗೋಪಾಲಕೃಷ್ಣ ಗೋಖಲೆ, ವಲ್ಲಭ ಭಾಯಿ ಪಟೇಲ್, ಮಹಾತ್ಮಾ ಗಾಂಧೀಜೀ ಮೊದಲಾದ ಎಲ್ಲ ಸ್ವಾತಂತ್ರ್ಯ ಸೇನಾನಿಗಳು ಗೋಹತ್ಯೆಯ ವಿರುದ್ಧ ದನಿ ಎತ್ತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದೊಡನೆಯೇ ಗೋಹತ್ಯೆಯನ್ನು ಸಂಪೂರ್ಣ ನಿಷೇಧಿಸಲಾಗುವುದು ಎಂಬ ಭಾರೀ ಆಶ್ವಾಸನೆಯನ್ನೂ ನೀಡಿದ್ದರು.
- ಭಾರತ ಸಂವಿಧಾನದ ೪೮ನೇ ವಿಧಿಯಲ್ಲಿ ಗೋವಧೆ ನಿಷೇಧಿಸಬೇಕೆಂಬ ಉಲ್ಲೇಖವನ್ನು ಮಾಡಲಾಗಿದೆ.
- ೧೯೬೬ರಲ್ಲಿ ಗೋಹತ್ಯಾ ನಿಷೇಧವನ್ನು ಆಗ್ರಹಿಸಿ ಲಕ್ಷಾಂತರ ಮಂದಿ ದೆಹಲಿಯ ಸಂಸತ್ ಭವನದ ಮೇಲೆ ಮುತ್ತಿಗೆ ಹಾಕಿದರು.

**ಭಾರತ ಸಂಸತ್ತಿನಲ್ಲಿ ಗೋಹತ್ಯೆಯನ್ನು ವಿರೋಧಿಸಿ ಖಾಸಗಿ ಮಸೂದೆ ಮಂಡನೆ :** 1979, 1985, 1990, 1994, 1996, 1999, 2000ದಲ್ಲಿ

- ೧೯೮೨ರಲ್ಲಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಎಲ್ಲ ರಾಜ್ಯಗಳಿಗೂ ಬರೆದ ಪತ್ರದಲ್ಲಿ ಗೋಹತ್ಯೆ ನಿಷೇಧಿಸುವಂತೆ ಸೂಚಿಸಿದ್ದರು.
- ಗುಜರಾತ್, ಮಧ್ಯಪ್ರದೇಶ, ರಾಜಸ್ತಾನ್, ಛತ್ತೀಸ್‌ಘರ್ ರಾಜ್ಯಗಳಲ್ಲಿ ಸಂಪೂರ್ಣ ಗೋಹತ್ಯಾ ನಿಷೇಧ ಕಾನೂನನ್ನು ಜಾರಿಗೊಳಿಸಲಾಗಿದೆ. ಕಾನೂನು ಮೊದಲ ಬಾರಿಗೆ ಗುಜರಾತ್‌ನಲ್ಲಿ ೧೯೪೪ರಲ್ಲಿ ಜಾರಿಯಾಯಿತು.
- ೨೦೦೧ರಲ್ಲಿ **'ರಾಷ್ಟ್ರೀಯ ಗೋಸೇವಾ ಆಯೋಗ'**ದ ಸ್ಥಾಪನೆಯಾಗಿದೆ.

**ಗೋಪಾಲ ಗೋವರ್ಧನ ಗೋಶಾಲೆ, ಪಥಮೇಡ, ರಾಜಸ್ಥಾನ :** ಪೂಜ್ಯ ಶ್ರೀ ದತ್ತಶರಣಾನಂದಜೀ ಮಹಾರಾಜ್‌ರ ನೇತೃತ್ವದಲ್ಲಿ ನಡೆಯುತ್ತಿದೆ. 1 ಲಕ್ಷಕ್ಕೂ ಅಧಿಕ ಗೋವುಗಳ ಪಾಲನೆ-ಪೋಷಣೆ ಮಾಡುತ್ತಿದ್ದಾರೆ.

- ನಾಗಪುರದ ಗೋ ವಿಜ್ಞಾನ ಅನುಸಂಧಾನ ಕೇಂದ್ರದಲ್ಲಿ ಗೋವುಗಳ ಕುರಿತಾಗಿ ವಿಶೇಷ ಅಧ್ಯಯನ ನಡೆಯುತ್ತಿದೆ.
- ಗೋವಿಗೆ ಸಂಬಂಧಿಸಿದಂತೆ ೪ ಪೇಟೆಂಟ್ಗಳು ಲಭಿಸಿವೆ.

**ಕಾಮದುಘಾ ಯೋಜನೆ :** ಶ್ರೀರಾಮಚಂದ್ರಾಪುರಮಠದ ಪೂಜ್ಯ ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆಯುತ್ತಿದೆ. ಈ ಯೋಜನೆಗೆ ನಾಲ್ಕು ಆಯಾಮಗಳು. ಭಾರತೀಯ ಗೋವಂಶದ ಸಂರಕ್ಷಣೆ, ಸಂವರ್ಧನೆ, ಸಂಶೋಧನೆ ಹಾಗೂ ಸಂಬೋಧನೆ. ಇದರಡಿಯಲ್ಲಿ ಹೊಸನಗರದ ಅಮೃತಧಾರಾ ಗೋಲೋಕದಲ್ಲಿ ಉಳಿದಿರುವ ಮೂವತ್ತಮೂರು ಗೋತಳಿಗಳಲ್ಲಿ 30ರ ಸಂರಕ್ಷಣೆ, ಸಂವರ್ಧನೆ ಮಾಡಲಾಗುತ್ತಿದೆ. ದೇಶದೆಲ್ಲೆಡೆ 108 ಗೋಶಾಲೆಗಳನ್ನು ಸ್ಥಾಪಿಸುವ ಸಂಕಲ್ಪ ಇದೆ. ಈ ಯೋಜನೆಯ 'ಆರ್ಥಿಕ ಲಾಭ ದೃಷ್ಟಿ' ಗೋ ಸಾಕಾಣಿಕೆಗೆ ಮತ್ತಷ್ಟು ಚೈತನ್ಯವನ್ನು ತುಂಬುತ್ತಿದೆ.

**ತಳಿ ಸಂವರ್ಧನಾ ಯೋಜನೆಗಳು :** ಬಿಕಾನೇರ್‌ನಲ್ಲಿ ರಾಟಿ ತಳಿ, ಆಂಧ್ರಪ್ರದೇಶ-ಬೀದರ್‌ನಲ್ಲಿ ದೇವನಿ ತಳಿ, ಅಜ್ಜಂಪುರದಲ್ಲಿ (ಕರ್ನಾಟಕ) ಅಮೃತ ಮಹಲ್ ತಳಿ, ತುಮಕೂರಿನಲ್ಲಿ ಹಳ್ಳಿಕಾರ್ ತಳಿ, ಹಾವೇರಿಯಲ್ಲಿ ಖಿಲಾರಿ ತಳಿ, ಹೊಸನಗರದಲ್ಲಿ (ಕರ್ನಾಟಕ) ಕೃಷ್ಣಾತೀರ ತಳಿ, ಮುಳಿಯ-ಕೈರಂಗಳ-ಭಾನ್ಕುಳಿಯಲ್ಲಿ (ಕರ್ನಾಟಕ) ಮಲೆನಾಡು ಗಿಡ್ಡ ತಳಿ, ಬಜಕೂಡ್ಲಿನಲ್ಲಿ (ಕೇರಳ) ಕಾಸರಗೋಡು ತಳಿ. ಹರ್ಯಾಣ, ಥಾರ್‌ಪಾರ್ಕರ್ ತಳಿ ಸಂವರ್ಧನಾ ಕೇಂದ್ರಗಳೂ ಇವೆ.

- ಸದ್ಯ, ಗೋ ಸಂರಕ್ಷಣಾ ಕೈಂಕರ್ಯದಲ್ಲಿ ಹಲವಾರು ಮಠಮಂದಿರಗಳು, ಸಂಘಸಂಸ್ಥೆಗಳು ಸಕ್ರಿಯವಾಗಿವೆ. ಅನಾಥ, ಅಶಕ್ತ ಪಶುಗಳ ಪಾಲನೆಯಲ್ಲಿ ದೇಶಾದ್ಯಂತ ವ್ಯಾಪಿಸಿರುವ **ಪಿಂಜರಾಪೋಲ್ ಗೋಶಾಲೆಗಳ ಜಾಲ** ಸುಪ್ರಸಿದ್ಧವಾಗಿದೆ.

**ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ (2009-10) :** ಗೋ ಸಂರಕ್ಷಣೆಯ ಸಂದೇಶವನ್ನು ದೇಶವ್ಯಾಪಿಗೊಳಿಸಲು ಆಂದೋಲನ ಮಾದರಿಯ ಯಾತ್ರೆಯನ್ನು ಹುಟ್ಟುಹಾಕಲಾಗಿತ್ತು. 2009ರ ಸಪ್ಟೆಂಬರ್ 30ರಂದು ಕುರುಕ್ಷೇತ್ರದಿಂದ ಹೊರಟ ಯಾತ್ರೆ, 108 ದಿನಗಳ ಕಾಲ ದೇಶದ ಮೂಲೆ-ಮೂಲೆಗಳಲ್ಲಿ ಸಂಚರಿಸಿ, 2010ರ ಜನವರಿ 17ರಂದು ನಾಗಪುರದಲ್ಲಿ ಸಮಾಪನಗೊಂಡಿತು. ಭಾರತ ಮಹಾನ್-ಮಹಾನ್ ಸಂತ ಮಹಂತರ ಆಶೀರ್ವಾದಗಳೊಂದಿಗೆ ನಡೆದ ಯಾತ್ರೆಯ ನೇತೃತ್ವವನ್ನು ಪೂಜ್ಯ ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿ ವಹಿಸಿದ್ದರು. ಕಡೆಯಲ್ಲಿ 31 ಜನವರಿ 2010ರಂದು ಗೋವಿನ ಕಲ್ಯಾಣವನ್ನು ಉದ್ದೇಶಿಸಿ ಭಾರತದ ಮಹಾಮಹಿಮ ರಾಷ್ಟ್ರಪತಿಗಳಿಗೆ ಪ್ರಸ್ತಾವನೆಯೊಂದನ್ನು ಸಲ್ಲಿಸಲಾಯಿತು. ಪ್ರಸ್ತಾವನೆಗೆ 8.5 ಕೋಟಿ ಹಸ್ತಾಕ್ಷರಗಳ ಬೆಂಬಲವಿದ್ದದ್ದು ವಿಶೇಷ.

**ಜಗತ್ತಿನ ಉಳಿದೆಡೆಗಳಲ್ಲಿ :**

- ಕ್ಯೂಬಾ ಗೋಹತ್ಯೆಯ ಮೇಲೆ ಸಂಪೂರ್ಣ ನಿಷೇಧ ಹೇರಿದೆ (ಫಿಡೆಲ್ ಕ್ಯಾಸ್ಟ್ರೋನ ಅವಧಿಯಲ್ಲಿ).
- ಇರಾನಿನಲ್ಲಿ ಗೋಹತ್ಯಾ ನಿಷೇಧದ ಕಾನೂನಿದೆ.
- ಇಂಡೋನೇಷ್ಯಾದ ನೂಪಾನಿಸದ ದ್ವೀಪದಲ್ಲಿ ಗೋಮಾಂಸ ಭಕ್ಷಣೆಗೆ ಬಹಿಷ್ಕಾರ ಹೇರಲಾಗಿದೆ.
- ಬ್ರೆಜಿಲ್‌ನ ಜಾನುವಾರು ಸಂತತಿಯ ೯೮% ಆಕಳುಗಳು ಭಾರತದ ಓಂಗೋಲ್ ತಳಿಯವುಗಳು.
- ಆಷ್ಟ್ರೇಲಿಯಾ ಮೊದಲಾದ ದೇಶಗಳಲ್ಲಿ ತಮ್ಮ ದೇಶದ ತಳಿ ಹಾಗೂ ನಮ್ಮ ಗೋ ತಳಿಗಳ ಸಂಕರದಿಂದ 'ಬ್ರಾಹ್ಮನ್ ತಳಿ'ಯನ್ನು ರೂಪಿಸಿದ್ದಾರೆ.
- ದಕ್ಷಿಣ ಆಫ್ರಿಕಾದಲ್ಲಿ ಇಂದಿಗೂ ೨೦ ಗೋವುಗಳನ್ನು ವಧುದಕ್ಷಿಣೆಯಾಗಿ ನೀಡುವ ಸಂಪ್ರದಾಯವಿದೆ.
- ಬರ್ಮಾದಲ್ಲಿ ಗೋಹತ್ಯೆ ಮಾಡಿದವರನ್ನು ಗಲ್ಲಿಗೇರಿಸುತ್ತಿದ್ದರು.
- ಅಫ್ಘಾನಿಸ್ಥಾನದ ೧೧೦ನೇ ಅಹಲ್ ಸುನ್ನತ್ ಗೋಹತ್ಯೆಯನ್ನು ನಿಷೇಧಿಸಿ ಫತ್ವಾ ಹೊರಡಿಸಿದ್ದನು.
- ಸುಮೇರಿಯನ್ ಮತ್ತು ಬೆಬಿಲೋನಿಯನ್ ನಾಗರಿಕತೆಯ ಕಾಲದಲ್ಲಿ ಗೋಹತ್ಯಾ ನಿಷೇಧ ಕಾನೂನಿತ್ತು.

**- ಭಾರತೀಶ**